CLAUSES 9 to 29

MADAM SPEAKER.—The question is

"That Clauses 9 to 29, both inclusive do stand part of the Bill".

The motion was adopted.

Clauses 9 to 29, both inclusive, were added to the Bill.

SCHEDULES I and II

MADAM SPEAKER.—The question is

"That Schedule I and Schedule II do stand part of the Bill."

The motion was adopted

Schedule I and II were added to the Bill.

CEASES 1, etc.,

MADAM SPEAKER.—The question is

"That Clause 1, the Long Title the Preamble and the Enacting Formula do stand part of the Bill."

The motion was adopted

Clause 1, the Long Title the Preamble and the Enacting Formula were added to the Bill.

Motion to pass

SRI H. C. SRIKANTAIAH.—I beg to move.

"That the Karnataka Preservation of Trees Bill, 1976, as amended be passed"

MADAM SPEAKER —The question is

"That the Karnataka Preservation of Trees Bill, 1976 as amended, be passed."

The Motion was adopted and the Bill as amended was passed

KARNATAKA CHILDREN (AMENDMENT) BILL 1976

(Governor's recommendation)

MADAM SPEAKER.—I have received the recommendation of the Governor for the consideration of the Karnataka Children (Amendment) Bill, 1976.

Motion to Consider

SMT. MANORAMA MADHWARAJ (Minister of State for Women and Children Welfare).—I beg to move.

"That the Karnataka Children (Amendment) Bill, 1976 be taken into consideration."

MADAM SPEAKER.—Motion moved

"That the Karnataka Children (Amendment) Bill, 1976 be taken into consideration."

[MR. DEPUTY SPEAKER.—in the Chair]

† ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಅಧ್ಯಕ್ಷರೇ, ಇವತ್ತು ನಾನು ಕರ್ನಾಟಕ ಮಕ್ಕಳ ತಿದ್ದುಪಡಿ ಮಸೂದೆಯನ್ನು ಸೂಚಿಸಲು ಬಯಸುತ್ತೇನೆ. ಕರ್ನಾಟಕ ಮಕ್ಕಳ ಆಕ್ಟ್ ೧೯೬೪ ಇದನ್ನು ರಾಷ್ಟ್ರಸರ್ಕಾರವು ೧೯೬೪ರ ಏಪ್ರಿಲ್ ೯ರಂದು ಜಾರಿಗೆ ತಂದಿರುವುದು. ಈ ಮಕ್ಕಳ ಆಕ್ಟ್ ಕೇವಲ ಮೂರು ಸಣ್ಣ ತಿದ್ದುಪಡಿಗಳನ್ನು ಸೂಚಿಸಲು ನಾನು ಬಯಸುತ್ತೇನೆ. ಸೆಕ್ಷನ್ ೧೦, ಆಗೂ ಸೆಕ್ಷನ್ ೧೦ ಎ, ಸೆಕ್ಷನ್ ೨೬ ಎ ಇವುಗಳಿಗೆ ತಿದ್ದುಪಡಿಯನ್ನು ತರಬೇಕಾಗಿದೆ. ಸೆಕ್ಷನ್ ೧೦ ರ ಪ್ರಕಾರ ಬಾಲ ಅಪರಾಧಿಯನ್ನು ಸ್ತ್ರಿ ತ್ತು ವಯಸ್ಕ ಅಪರಾಧಿಯನ್ನು ಒಟ್ಟಿಗೆ ವಿಚಾರಣೆ ನಡೆಸತಕ್ಕದಲ್ಲ. ಯಾವು ದಾದರೂಕೇಸಿನಲ್ಲಿ ಒಬ್ಬ ಬಾಲಕ ಮತ್ತು ಒಬ್ಬ ವಯಸ್ಕ ಇಬ್ಬರೂ ಆರೋಪಿಗಳಾಗಿದ್ದರೆ ಕೋರ್ಟು ಅವರ ಮೇಲಿರುವ ಕೇಸುಗಳನ್ನು ಪ್ರತ್ಯೇಕಗೊಳಿಸಿ ವಯಸ್ಕನ ಮೇಲಿನ ವಿಚಾರಣೆಯನ್ನು ಮಾತ್ರ ನಡೆಸ ತಕ್ಕದ್ದು. ಹೀಗೆ ಪ್ರತ್ಯೇಕಗೊಳಿಸಲ್ಪಟ್ಟ ಬಾಲಕನ ಮೇಲಿನ ವಿಚಾರಣೆ ಯಾವರೀತಿ ಮಾಡಬೇಕು ಎಂಬು ದನ್ನು ಸ್ಪಷ್ಟಪಡಿಸುವುದಕ್ಕಾಗಿ ಸೆಕ್ಷನ್ ೧೦ನ್ನು ತಿದ್ದುಪಡಿ ಮಾಡಿದೆ. ಈ ತಿದ್ದುಪಡಿಯ ಪ್ರಕಾರ ಪ್ರತ್ಯೇಕಗೊಳಿಸಲ್ಪಟ್ಟ ಬಾಲಕನ ಮೇಲಿನ ಕೇಸನ್ನು ಬಾಲಾಪರಾಧಿಗಳ ವಿಚಾರಣೆ ಕೋರ್ಟ್‌ಗೆ (ಜೂವಿನಲ್ ಕೋರ್ಟಿಗೆ) ವರ್ಗಾಯಿಸತಕ್ಕದ್ದು. ಜ್ಯೂವಿನಲ್ ಕೋರ್ಟ್ ಇಲ್ಲದಿದ್ದ ಸ್ಥಳಗಳಲ್ಲಿ ಬಾಲ ಅಪರಾಧಿ ಗಳನ್ನು ವಿಚಾರಣೆ ಮಾಡಲು ಅಧಿಕಾರ ಹೊಂದಿರುವ ಕೋರ್ಟುಗಳಿಗೆ ವರ್ಗಾಯಿಸತಕ್ಕದು. ಇದರ ಉದ್ದಿಶ್ಯ ಬಾಲಾಪರಾಧಿಗಳನ್ನು ಜಡ್ಡು ಹಿಡಿದ ವಯಸ್ಕ ಅಪರಾಧಿಗಳ ಸಂಪರ್ಕದಿಂದ ತಪ್ಪಿಸಿ ಅವರನ್ನು ಸಮಾಜಕ್ಕೆ ಪುನಃ ಸೇರಿಸಿಕೊಳ್ಳುವುದು ಜ್ಯೂವಿನಲ್ ಕೋರ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಮ್ಯಾಜಿಸ್ಟ್ರೇಟರು ಗಳಿರುವ ಬೆಂಚ್ ಇರುತ್ತದೆ. ಇವರಲ್ಲಿ ಒಬ್ಬರಾದರೂ ಮಹಿಳಾ ಮ್ಯಾಜಿಸ್ಟ್ರೇಟರಾಗಿರಬೇಕಾಗುತ್ತಾರೆ. ಜ್ಯೂವಿನಲ್ ಕೋರ್ಟಿನಲ್ಲಿ ಕೇಸಿಗೆ ಸಂಬಂಧಪಡದ ಹೊರಗಿನವರಿಗೆ ಪ್ರವೇಶವಿರುವುದಿಲ್ಲ. ಬಾಲಕ ಅಪರಾಧಿಯ ತಂದೆ ತಾಯಿ ಅಥವಾ ಪೋಷಕರು ಸಾಮಾನ್ಯವಾಗಿ ಇದ್ದೇ ಇರುತ್ತಾರೆ. ವಕೀಲರಿಗೆ ಮತ್ತು ದುಷ್ಟಿನಲ್ಲಿರುವ ಪೋಲೀಸರಿಗೆ ಪ್ರವೇಶವಿರುವುದಿಲ್ಲ. ವಿಚಾರಣೆಯನ್ನು ಕೋರ್ಟು ಹಾಲಿನಲ್ಲಿ ಅಲ್ಲದೆ ಬೇರೆ ಕೊಠಡಿಯಲ್ಲೋ ಅಥವಾ ರಿಮ್ಯಾಂಡ್ ಹೋಮಿನಲ್ಲೋ ಮಾಡಲಾಗುವುದು. ಈ ಎಲ್ಲಾ ಕಾರಣಗಳಿಂದ ಬಾಲ ಅಪರಾಧಿಯ ಮನಸ್ಸಿನ ಮೇಲೆ ಯಾವ ದುಷ್ಪರಿಣಾಮವೂ ಉಂಟಾಗುವುದಿಲ್ಲ. ಅವನ ಮನಸ್ಸಿನಲ್ಲಿ ತನ್ನ ಹಿತಚಿಂತಕರ ನಡುವೆ ಇದ್ದೇನೆಂಬ ಭರವಸೆ ಉಂಟಾಗುತ್ತದೆ. ಈಗ ಹೊಸದಾಗಿ ಸೇರಿಸಿರುವ ಸೆಕ್ಷನ್ ೧೦ ಎ ಯ ಪ್ರಕಾರ, ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆಯಾಗಬೇಕಾಗಿರುವ ಯಾವು ದಾದರೂ ಕೇಸಿನಲ್ಲಿ ಒಬ್ಬ ಬಾಲಕ ಸುತ್ತು ಒಬ್ಬ ವಯಸ್ಕ ಕೂಡಿ ಆರೋಪಿಗಳಾಗಿದ್ದಲ್ಲಿ ಅವರ ಕೇಸು ಗಳನ್ನು ಪ್ರತ್ಯೇಕಿಸಿ ವಯಸ್ಕನ ಮೇಲಿನ ಕೇಸನ್ನು ಮಾತ್ರ ಸೆಷನ್ಸ್ ಕೋರ್ಟಿಗೆ ಕಳುಹಿಸತಕ್ಕದ್ದು. ಮತ್ತು ಬಾಲಕನ ಮೇಲಿನ ಕೇಸನ್ನು ಮ್ಯಾಜಿಸ್ಟ್ರೇಟರೇ ವಿಚಾರಿಸತಕ್ಕದ್ದು. ಈ ಹೊಸ ಸೆಕ್ಷನ್ನಿನ ಉದ್ದೇಶವೂ, ಸೆಕ್ಷನ್ ೧೦ ರ ಬಗ್ಗೆ ಹೇಳಿದ ಉದ್ದೇಶಗಳಂತೆಯೇ ಇದೆ.

ಈಗ ಸೆಕ್ಷನ್ ೨೬ (ಎ) ಪ್ರಕಾರ ತಿದ್ದುಪಡಿ ಸೂಚಿಸಿ ಈ ಬಾಲ ರಕ್ಷಣಾ ಗೃಹಗಳ ಮೇಲ್ವಿಚಾರಣೆ ಗಾಗಿ ಒಂದು ಕಾರ್ಯಕಾರಿ ಮಂಡಲಿಯನ್ನು ನೇಮಿಸಬೇಕಾಗುವುದು. ಇದಕ್ಕೆ ಕಾರಣಗಳು, ಈಗ ಇರುವ ಪ್ರಮಾಣಿಕ ಶಾಲೆಗಳಿಗೆ ಮೇಲ್ವಿಚಾರಣೆಗಾಗಿ ಸರ್ಕಾರಿ ಅಧಿಕಾರಿಗಳು ಹಾಗೂ ಅಧಿಕಾರೇತರರು ಗಳನ್ನು ಒಳಗೊಂಡು ಕಾರ್ಯಕಾರಿ ಮಂಡಲಿಗಳು ಇವೆ. ಅದೇ ರೀತಿಯಲ್ಲಿ ಬಾಲ ರಕ್ಷಣಾ ಗೃಹಗಳ ಕಾರ್ಯಕಾರಿ ಮಂಡಲಿಗಳು ಇರಬೇಕು ಎಂದು ತಿದ್ದುಪಡಿ ಸೂಚಿಸಲಾಗಿದೆ.

ಈ ಒಳ್ಳೆಯ ಕಾರಣಗಳಿಗಾಗಿ ಈವೊತ್ತು ನಾನು ಸೂಚಿಸಿರುವ ತಿದ್ದುಪಡಿಗಳನ್ನು ಮಾನ್ಯ ಸದಸ್ಯರುಗಳು ಯಾವ ಚರ್ಚೆಗೂ ಆಸ್ಪದ ಕೊಡದೆ ಅಂಗೀಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು, ಈ ಮಕ್ಕಳ ತಿದ್ದುಪಡಿಯನ್ನು ಮಂಡಿಸಿ ಯಾವ ಚರ್ಚೆಗೂ ಅವಕಾಶ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಮ್ಮಾವರು ಹೆಂಗಸರ ಮತ್ತು ಮಕ್ಕಳ ಮಂತ್ರಿಗಳಾದ ಮೇಲೆ ನಮ್ಮ ಹೆಂಗಸರು ಮತ್ತು ಮಕ್ಕಳು ಬಹಳ ಸುಖವಾಗಿದ್ದಾರೆ. ಹೊಟ್ಟೆಗಿಲ್ಲ, ಬಟ್ಟೆಗಿಲ್ಲ, ಬರ ಬಂತು, ಅಂತೂ ಸುಖವಾಗಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಆದ್ದರಿಂದ ನಾನು ಚರ್ಚೆ ಮಾಡದೆ ಕೆಲವು ಸಲಹೆಗಳನ್ನು ಮಾತ್ರ ಹೇಳಿ ಇದಕ್ಕೆ ನನ್ನ ಒಪ್ಪಿಗೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಚಿಲ್ಡ್ರನ್ ಆಫೆಂಡರ್ಸ್ ಅನ್ನು ವಿಚಾರಣೆ ಮಾಡಿ ಯಾವರೀತಿ ಶಿಕ್ಷೆ ಕೊಡಬೇಕು ಎನ್ನುವುದರ ಬಗ್ಗೆ ಹಾಗೂ ರಿಮ್ಯಾಂಡ್ ಹೋಂಗಳ ಆಡಳಿತದ ಬಗ್ಗೆ ಕೆಲವು ತಿದ್ದುಪಡಿಗಳನ್ನು ಅವರೂ ತಂದಿದ್ದಾರೆ. ನಾನಾದರೂ ಕೂಡ ಈ ತಿದ್ದುಪಡಿಗಳಿಗೆ ಯಾವ ವಿರೋಧವನ್ನು ಕೂಡ ಮಾಡದೆ ಇವಕ್ಕೆ ನನ್ನ ಮೂಲಭೂತವಾದ ಸಲಹೆಯನ್ನು ಮಾಡಬಯಸುತ್ತೇನೆ. ವಯಸ್ಕರಲ್ಲದೆ ಇರತಕ್ಕವರು ಅಪರಾಧ ಮಾಡುವುದು ದಿನೇ ದಿನೇ ಹೆಚ್ಚಾಗುತ್ತಿದೆ. ಅಪರಾಧವನ್ನು ಕಡಿಮೆ ಮಾಡುವುದಕ್ಕೆ ಶಿಕ್ಷೆ ಮಾಡುವುದಕ್ಕೆ ಬದಲಾಗಿ ಇಂಥ ಅಪರಾಧಗಳೇ ಕಡಿಮೆ ಯಾಗುವುದಕ್ಕೆ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ.

ಈಗ ನಮ್ಮ ಬೆಂಗಳೂರು ನಗರದ ಮಟ್ಟಿಗೆ ಹೇಳುವುದಾದರೆ, ಅನೇಕ ಸಣ್ಣ ಹುಡುಗರು ಮದುವೆ ಮನೆಗಳ ಹತ್ತಿರ ಮತ್ತು ಮದುವೆ ಮಾಡತಕ್ಕಂಥ ಛತ್ರಗಳ ಹತ್ತಿರ ಇರುತ್ತಾರೆ. ಊಟ ಮಾಡಿದ ಎಂಜಲೆಲೆಗಳನ್ನು ಹೊರಗೆ ಬಿಸಾಕಿದ ಮೇಲೆ ಆ ಹುಡುಗರು ಆ ಎಲೆಗಳಲ್ಲಿರುವ ಅನ್ನವನ್ನು ನಾಯಿಗಳಂತೆ ಕಿತ್ತಾಡಿಕೊಂಡು ಊಟ ಮಾಡುತ್ತಾರೆ. ಇದು ಒಂದು ದೊಡ್ಡ ತಪ್ಪು ಎಂದು ನಾನು ತಿಳಿದುಕೊಂಡಿದ್ದೇನೆ ಮತ್ತು ಇದಕ್ಕೆ ಅವಕಾಶ ಮಾಡಿಕೊಟ್ಟಿರುವ ಸಮಾಜಕ್ಕೂ ಧಿಕ್ಕಾರ ಹಾಕಬೇಕೆಂದು ಹೇಳುತ್ತೇನೆ. ಇದನ್ನು ಸಹ ಅಪರಾಧ ಎಂದು ತಿಳಿದುಕೊಂಡು ಇದನ್ನು ತಡೆಗಟ್ಟುವುದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇಂತಹ ಹುಡುಗರನ್ನು ಕರೆದುಕೊಂಡು ಹೋಗಿ ಅವರಿಗೆ ತಕ್ಕ ವಿದ್ಯೆಯನ್ನು ಮತ್ತು ತಕ್ಕ ಕೆಲಸಗಳನ್ನು ಕೊಡಬೇಕಂದು ಸಲಹೆ ಮಾಡುತ್ತೇನೆ.

ಇನ್ನು ಇತ್ತೀಚೆಗೆ ಬೆಂಗಳೂರು ನಗರದಲ್ಲಿ ರಾತ್ರಿ ಹೊತ್ತು ಭಿಕ್ಷೆ ಬೇಡುವುದು ವಿಪರೀತ ಜಾಸ್ತಿಯಾಗಿದೆ. ಇದೊಂದು ದೊಡ್ಡ ನ್ಯೂಸೆನ್ಸ್ ಆಗಿದೆ. ಈ ಕೆಲಸಕ್ಕೆ ಸಣ್ಣ ಸಣ್ಣ ಹುಡುಗರನ್ನು ದೊಡ್ಡವರು ಕಳಂಹಿಸುತ್ತಾರೆ. ಇದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಗ್ಯಾಂಗ್‌ಗಳಿವೆ. ಆ ಗ್ಯಾಂಗ್‌ನಲ್ಲಿರುವವರು ಸಣ್ಣ ಸಣ್ಣ ಹುಡುಗರಿಗೆ ಪಿಕ್-ಪಾಕೇಟ್ ಮಾಡುವ ಕೆಲಸವನ್ನು ಹೇಳಿಕೊಟ್ಟು, ಅವರುಗಳಿಂದ ಆ ಕೆಲಸವನ್ನು ಮಾಡಿಸುತ್ತಿದ್ದಾರೆ. ಇದೊಂದು ವೃತ್ತಿಯಂತೆ ನಡೆಯುತ್ತಿದೆ. ಇಂತಹ ಪುಡಾರಿಗಳನ್ನು ಪತ್ತೆಹಚ್ಚುವಲ್ಲಿ ತಮ್ಮ ಗಮನ ಹರಿದು, ಹುಡುಗರು ಇಂತಹವರ ಬಲೆಗೆ ಬೀಳದಂತೆ ತಾವು ನೋಡಿಕೊಳ್ಳಬೇಕು. ಮತ್ತು ಇಂತಹ ಹುಡುಗರು ಈ ಕೆಲಸವನ್ನು ಖಾಯಂ ಆಗಿ ಮಾಡುತ್ತಾರೆಂಬ ಬಗ್ಗೆ ಆನರ್ಟಿಕಲ್ ಆಗಿ ಸ್ಟಡಿ ಮಾಡಬೇಕು ಜೊತೆಗೆ ಈ ಹುಡುಗರ ಹಿಂದೆ ಇರತಕ್ಕಂಥ ಪುಡಾರಿಗಳನ್ನು ಕಂಡುಹಿಡಿದ, ಅಂತಹವರಿಗೆ ಕ್ರಿಮಿನಲ್‌ಗಳಿಗಿಂತ ಹೆಚ್ಚಿನ ರೀತಿಯಲ್ಲಿ ಶಿಕ್ಷೆಯನ್ನು ಕೊಡಬೇಕು.

ಇನ್ನು ಹೆಣ್ಣು ಹುಡುಗರು ಅದರಲ್ಲಿಯೂ ಮೈನರ್ ಲೇಡೀಸ್ ಕೆಲವರು ಕೆಟ್ಟದಾರಿಗೆ ಬಿದ್ದಿರುತ್ತಾರೆ ಅಂತಹವರನ್ನು ರಿಮ್ಯಾಂಡ್ ಹೋಂಗೆ ಸೇರಿಸಬೇಕು ಮತ್ತು ಅವರು ಕೆಟ್ಟ ದಾರಿಗೆ ಹೋಗದಂತೆ ಕಾರ್ಯಕ್ರಮ ಕೈಗೊಳ್ಳಬೇಕು. ಒಟ್ಟಿನಲ್ಲಿ ಈ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ದುರ್ವಹಾರಗಳು ಮತ್ತು ಕೆಟ್ಟ ಕೆಲಸಗಳು ಏನಿವೆ ಅವುಗಳು ಹೋಗಬೇಕು. ಜನರು ಹೊಟ್ಟೆಗಿಲ್ಲದೆ ಇಂತಹ ಕೆಲಸಗಳನ್ನು ಮಾಡುತ್ತಿರಬಹುದು, ಆದ ಕಾರಣ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕಂಡುಹಿಡಿಯಬೇಕಲ್ಲದೆ, ಎಜುಕೇಷನ್ ಸೈಡ್ ಮತ್ತು ಪ್ರಿವೆಂಟೀವ್ ಸೈಡ್‌ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಟಿಫೈಡ್ ಸ್ಕೂಲ್, ರಿಮ್ಯಾಂಡ್ ಹೋಂ ಮತ್ತು ಕೋರ್ಟು ಕಛೇರಿಗಳಿಗೆ ಸಂಬಂಧ ಪಟ್ಟಂತೆ ಕಮಿಟಿಗಳನ್ನು ರಚನೆ ಮಾಡುವಾಗ ಅವರಲ್ಲಿ ಯಾರು ಆಸಕ್ತಿಯನ್ನು ಹೊಂದಿರುತ್ತಾರೋ ಅಂತಹವರನ್ನೇ ನೇಮಕ ಮಾಡಬೇಕು. ರಾಜಕೀಯವಾಗಿ ಇವುಗಳನ್ನು ಬಳಸಿಕೊಂಡು ಮಾಡಬೇಕಾಗಿಲ್ಲ. ಮತ್ತು ಕೇವಲ ಟಿ.ಎ ಡಿ.ಎ. ಗೋಸ್ಕರ ಬರುವವರನ್ನು ಈ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಡಿ. ಈ ಕೆಲಸಕ್ಕೆ ಹೆಂಗಸರನ್ನು ಹೆಚ್ಚಿಗೆ ಇಟ್ಟುಕೊಳ್ಳಿ. ಒಟ್ಟಿನಲ್ಲಿ ಸೇವಾ ಮನೋಭಾವವಿರುವರನ್ನು ಇದಕ್ಕೆ ಸಹಾಯಕರಾಗಿರುವವರನ್ನು ಉಪಯೋಗಿಸಿಕೊಳ್ಳಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆ ಚಿಕ್ಕದಾಗಿದ್ದರೂ ಕೂಡ ಇದೊಂದು ಬಹಳ ಪ್ರಾಮುಖ್ಯವಾದಂಥ ಮಸೂದೆ ಎಂದು ನಾನು ಭಾವಿಸುತ್ತೇನೆ. ಮತ್ತು ಈ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಈಗ ವಯಸ್ಕ ಅಪರಾಧಿಗಳನ್ನು ಮತ್ತು ಅಪ್ರಾಪ್ತ ವಯಸ್ಸಿನ ಅಪರಾಧಿಗಳನ್ನು ಒಂದೇ ಕಡೆ ವಿಚಾರಣೆ ಮಾಡುವುದಕ್ಕೆ ಬದಲು ಅಪ್ರಾಪ್ತ ವಯಸ್ಸಿನ ಅಪರಾಧಿಗಳನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡುವುದಕ್ಕೆ ತಾವು ಈ ಶಾಸನದಲ್ಲಿ ಏರ್ಪಾಡು ಮಾಡಿದ್ದೀರಿ. ಇದು ಬಹಳ ಸೂಕ್ತವಾದುದು. ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದಂತೆ ಒಂದು ಉತ್ತಮವಾದಂಥ ವಾತಾವರಣದಲ್ಲಿ ಇವರ ವಿಚಾರಣೆ ನಡೆಯುವಂತಿರಬೇಕು. ಮತ್ತು ಇದಕ್ಕೆ ಬೇಕಾದ ನ್ಯಾಯಾಧೀಶರನ್ನು ಆಯ್ಕೆ ಮಾಡುವಾಗ ಮತ್ತು ಇನ್ನಿತರ ಕಬ್ಬಂದಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದವರು ಬಹಳ ಎಚ್ಚರಿಕೆಯಿಂದ ಆಯ್ಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಈಗ ಕ್ರಿಮಿನಲ್ ಕೋರ್ಟುಗಳಲ್ಲಿ ವಿಚಾರಣೆ ಯಾವ ರೀತಿ ಆಗುತ್ತದೆಂಬುದನ್ನು ನಾವು ನೋಡುತ್ತಿದ್ದೇವೆ. ಕೆಲವರು ಯಾವುದೋ ಪ್ರಚೋದನೆಯಿಂದ ಅಪರಾಧ ಮಾಡಿದಾಗ ಕೋರ್ಟಿನ ಮುಂದೆ ಹಾಜರಾಗಬೇಕಾಗುತ್ತದೆ. ವಿಚಾರಣೆ ನಡೆದ ಮೇಲೆ ತಪ್ಪಿಗೆ ತಕ್ಕ ಶಿಕ್ಷೆಯನ್ನು ವಿಧಿಸಿದ ಮೇಲೆ, ಆದನ್ನು ಅನುಭವಿಸಿ ಹೊರಗೆ ಬರುವಾಗ ತಾನು ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಿದೆ ಎಂದು ತಿಳಿದುಕೊಳ್ಳದೆ ಪೂರ್ತಿ ಕ್ರಿಮಿನಲ್ ಆಗಿಯೇ ಹೊರಗೆ ಬರುವಂತಹ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಕಛೇರಿಯ ವಾತಾವರಣ ಮತ್ತು ಜೈಲಿನ ವಾತಾವರಣವೇ ಕಾರಣವೆಂದು ಹೇಳಬಹುದು. ಇವೊತ್ತು ಸಮಾಜದ ಪರಿಸರದಲ್ಲಿ ಉತ್ತಮರಾದಂಥ ನಾಗರೀಕರೂ ಕೂಡ ಅನೇಕ ಸಂದರ್ಭಗಳಲ್ಲಿ ಕೆಲವು ಅಪರಾಧಗಳನ್ನು ಮಾಡುವ ಸಂದರ್ಭ ಬರುತ್ತದೆ. ಅಂತಹವರನ್ನು ಅಧಿಕಾರಿಗಳು ಸೌಜನ್ಯತೆಯಿಂದ ನೋಡಬೇಕಾಗುತ್ತದೆ. ಮತ್ತು ಕೋರ್ಟಿನ ಒಂದು ವಾತಾವರಣ ಒಳ್ಳೆಯ ರೀತಿಯಲ್ಲಿರಬೇಕಾಗುತ್ತದೆ. ಅವನು ತಪ್ಪು ಮಾಡಿದ್ದಾನೆಂದು ಸಾಬೀತಾಗುವವರೆಗೆ ನಿರಪರಾಧಿಯೆಂದೇ ಭಾವಿಸಿ, ಆತನೂ ಸಹ ಈ ದೇಶದ ಒಬ್ಬ ಪ್ರಜೆ ಎಂಬುದಾಗಿ ಸೌಜನ್ಯದಿಂದ ನೋಡುವಂತಹ ಒಂದು ವಾತಾವರಣ ಕೋರ್ಟಿನಲ್ಲಿರಬೇಕು. ಮತ್ತು ಸತ್ಯವನ್ನು ಕಂಡುಹಿಡಿಯಬೇಕು. ನ್ಯಾಯಾಧೀಶರು ಕೊಟ್ಟಂತಹ ತೀರ್ಪು ಸರಿಯಾದುದು ಎಂಬ ನಂಬಿಕೆ ತಪ್ಪು ಮಾಡಿದವರಿಗೆ ಬರಬೇಕು. ತಾನು ಮಾಡಿದ ತಪ್ಪಿಗೆ ಶಿಕ್ಷೆ ಮತ್ತು ತಾನು ಉತ್ತಮ ಪ್ರಜೆಯಾಗಬಹುದಕ್ಕೆ ಅವಕಾಶ ಕೊಟ್ಟಿದ್ದಾರೆಂಬ ಭಾವನೆ ಹುಟ್ಟುವ ರೀತಿಯಲ್ಲಿ ಆ ವಿಚಾರಣೆ ಮತ್ತು ಶಿಕ್ಷೆ ಇರಬೇಕು ಆದರೆ ಇಂದು ಅಂತಹ ಒಂದು ವಾತಾವರಣ ಇಲ್ಲವಾಗಿದೆ ಜೊತೆಗೆ ನಿರಪರಾಧಿಗಳನ್ನು ಸಹ ಅಪರಾಧಿಗಳೆಂದು ಭಾವಿಸುವಂತಹ ಒಂದು ಪ್ರವೃತ್ತಿ ಇಂದು ನಡೆದಿದೆ. ಈ ಒಂದು ಕೆಲಸವನ್ನು ಮುಖ್ಯವಾಗಿ ಪೋಲೀಸ್ ಇಲಾಖೆಯ ಸಿಬ್ಬಂದಿಯವರು ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದು ತಪ್ಪಬೇಕು ಮತ್ತು ಎಳೆಯ ವಯಸ್ಸಿನ ಮಕ್ಕಳು ತಪ್ಪು ಮಾಡಿದಾಗ ಆ ಮಕ್ಕಳ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ತಮ್ಮ ಇಲಾಖೆಯವರು ಈ ಒಂದು ಶಾಸನವನ್ನು ಮಾಡಿದರೆ ಸಾಲದು, ಇದನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ, ಯಾರು ತಪ್ಪು ಮಾಡಿರುತ್ತಾರೆ, ಅಂತಹವರನ್ನು ಕೋರ್ಟಿನ ಮುಂದೆ ಕರೆದುಕೊಂಡು ಬಂದಾಗ, ಅವರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ವ್ಯವಸ್ಥೆಯಾಗಬೇಕು ಅವರ ಬಗ್ಗೆ ವಿಚಾರಣೆ ನಡೆಸುವಾಗ ಎಲ್ಲ ರೀತಿಯಿಂದಲೂ ಸಹಾಯ ಮಾಡುವಂತಹ ಒಂದು ವ್ಯವಸ್ಥೆಯನ್ನು ಕೂಡ ತಮ್ಮ ಇಲಾಖೆಯವರು ಮಾಡಬೇಕೆಂದು ಹೇಳುತ್ತೇನೆ ಮಕ್ಕಳು ಏನಾದರೂ ತಪ್ಪು ಮಾಡಿದರೆ, ಅದಕ್ಕೆ ಅವರು ವಾಸ ಮಾಡುವ ಪರಿಸರ ಮತ್ತು ಪ್ರಾಪ್ತ ವಯಸ್ಕರಾದವರು ಮುಖ್ಯ ಕಾರಣರು ಎಂದು ತಿಳಿದುಕೊಳ್ಳಬೇಕು. ಪ್ರಾಪ್ತ ವಯಸ್ಕರು ಮತ್ತು ಅಪ್ರಾಪ್ತ ವಯಸ್ಕರು ತಪ್ಪು ಮಾಡಿದಾಗ ಬೇರೆ ಬೇರೆ ಕಡೆ ವಿಚಾರಣೆ ನಡೆಸಿದರೆ ಅಷ್ಟೇ ಸಾಲದು, ಮಕ್ಕಳನ್ನು ಇಂತಹ ಅಪರಾಧ ಮಾಡುವುದಕ್ಕೆ ಹಚ್ಚುವವರು ಯಾರಿದ್ದಾರೆ, ಅಂತಹವರನ್ನು ಕಂಡುಹಿಡಿದು ಅವರಿಗೂ ಶಿಕ್ಷೆಯನ್ನು ವಿಧಿಸುವಂತಹ ಒಂದು ವ್ಯವಸ್ಥೆಯನ್ನು ನಿಮ್ಮ

ಕಾನೂನಿನಲ್ಲಿ ಮಾಡಬೇಕು. ಅದಕ್ಕೆ ಈ ಕಾನೂನನ್ನು ತಿದ್ದುಪಡಿಯನ್ನಾದರೂ ಮಾಡಬೇಕು. ಅಥವಾ ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ಆಗಲೀ, ಇಲ್ಲವೇ ಇಂಡಿಯನ್ ಪೀನಲ್ ಕೋಡನ್ನಾಗಲೀ ತಿದ್ದುಪಡಿ ಮಾಡುವುದರ ಮೂಲಕ ಯಾರು ತಮ್ಮ ಮಕ್ಕಳನ್ನು ಇಲ್ಲವೇ ನೆರೆಹೊರೆಯವರ ಮಕ್ಕಳನ್ನು ಇಂತಹ ಒಂದು ಅಪರಾಧಕ್ಕೆ ಹಚ್ಚುವಂತಹ ಹವ್ಯಾಸವನ್ನು ಇಟ್ಟುಕೊಂಡಿರುತ್ತಾರೋ, ಅಂತಹದನ್ನು ಘೋರ ಅಪರಾಧ ಎಂದು ಪರಿಗಣಿಸಿ ಶಿಕ್ಷೆ ವಿಧಿಸುವಂತಹ ವ್ಯವಸ್ಥೆಯನ್ನು ಮಾಡಬೇಕು.

ಆ ತಿದ್ದುಪಡಿಯ ವ್ಯಾಪ್ತಿ ತಮ್ಮ ಇಲಾಖೆಗೆ ಬಂದರೆ ಸೂಕ್ತ ಎಂದು ನಾನು ಭಾವಿಸುತ್ತೇನೆ. ಅಷ್ಟೇ ಅಲ್ಲ, ಶ್ರೀಮಾನ್ ಶಾಮಣ್ಣನವರು ಹೇಳಿದ ಹಾಗೆ ನಾವು ಪ್ರತಿನಿತ್ಯವೂ ದಿನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಕಲ್ಕತ್ತಾ ಮುಂಬೈ ಮದ್ರಾಸ್ ಮತ್ತು ಬೆಂಗಳೂರು ಮುಂತಾದ ದೊಡ್ಡ ನಗರಗಳಲ್ಲಿ ಅನೇಕರು ಅನೇಕ ಬಾಲಕರನ್ನು ಉಪಯೋಗಿಸಿಕೊಂಡು ಅಪರಾಧಗಳನ್ನು ಮಾಡಿದ್ದಾರೆ. ಈ ರೀತಿ ಬಾಲಕರನ್ನು ತಮ್ಮ ಸ್ವಂತ ಲಾಭಕ್ಕಾಗಿ ಉಪಯೋಗಿಸಿಕೊಂಡು ಲಾಭವನ್ನು ಪಡೆಯುವಂತಹ ಗ್ಯಾಂಗ್‌ಗಳು ಇವೆಯೆಂದು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ: ಎಷ್ಟೋ ಸಂದರ್ಭಗಳಲ್ಲಿ ಕೆಲವರು ಮಕ್ಕಳನ್ನು ಅಪಹರಿಸಿಕೊಂಡು ಹೋಗಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಅವರನ್ನು ಅಪರಾಧಿಗಳನ್ನಾಗಿ ಮಾಡಿ ಅವರನ್ನು ಸಮಾಜ ಕಂಟಕರನ್ನಾಗಿ ಮಾಡುವ ಶಾಲೆಗಳು ಇವೆಯೆಂದು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಮಕ್ಕಳು ಪಿಕ್ ಪಾಕೆಟ್ ಮತ್ತು ಕಳ್ಳತನದ ಅಪರಾಧವನ್ನು ಮಾಡುವುದಕ್ಕೆ ತರಪೇತಿಯನ್ನು ಕೊಡತಕ್ಕ ಕೇಂದ್ರಗಳು ಇವೆ. ಮಕ್ಕಳು ಈ ರೀತಿ ಅಪರಾಧಿಗಳಾಗತಕ್ಕದ್ದನ್ನು ತಡೆಹಿಡಿಯುವುದಕ್ಕೆ ಸಾಧ್ಯವಿದೆ. ಆ ರೀತಿ ಮಾಡದೆ ಅಪರಾಧಿಗಳನ್ನಾಗಿ ಮಾಡತಕ್ಕ ತರಪೇತಿಯನ್ನು ಕೊಡುತಕ್ಕ ಕೆಟ್ಟ ಜನಗಳ ಬಲೆಗೆ ಮಕ್ಕಳು ಬಿದ್ದರೆ ಅವರು ನಿರ್ಮೂಲವಾಗುತ್ತಾರೆ ಅವರು ಸಮಾಜಕ್ಕೇ ದೊಡ್ಡ ಕಂಟಕರಾಗುತ್ತಾರೆ. ಆದ್ದರಿಂದ ಸರ್ಕಾರದವರು ಇದನ್ನು ತಪ್ಪಿಸಿ ಸುಧಾರಣೆ ಮಾಡುವುದಕ್ಕೆ ವಿಶೇಷ ಗಮನವನ್ನು ಹರಿಸಬೇಕು. ಅವಶ್ಯವಾದರೆ ಇದಕ್ಕೆ ಒಂದು ಪ್ರತ್ಯೇಕವಾದ ಶಾಸನದ ಮೂಲಕ ಅಧಿಕಾರವನ್ನು ತೆಗೆದುಕೊಳ್ಳಬೇಕು. ಅವಶ್ಯವಿದ್ದರೆ ಇದಕ್ಕೆ ಕೇಂದ್ರ ಸರ್ಕಾರದವರ ನೆರವನ್ನು ಬೇಕಾದರೂ ಪಡೆದು ಇಂಥಾ ಒಂದು ಬದಲಾವಣೆಯನ್ನು ತರಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಈಗ ಈ ಒಂದು ಶಾಸನವನ್ನು ಮಾನ್ಯ ಮಂತ್ರಿಗಳು ಇಲ್ಲಿ ತಂದದ್ದು ಬಹಳ ಉಚಿತವಾಗಿದೆ. ಇದಕ್ಕೆ ಸರ್ವಾನುಮತದ ಅಂಗೀಕಾರವನ್ನು ಈ ಮಾನ್ಯ ಸಭೆ ಕೊಡುತ್ತದೆ ಎಂದು ನಾನು ನಂಬಿದ್ದೇನೆ.

† ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಸಭಾಧ್ಯಕ್ಷರೇ ಈಗ ತಾನೇ ನಾನು ಈ ಸಭೆಯ ಮುಂದೆ ಮಂಡಿಸಿದ ತಿದ್ದುಪಡಿ ಮಸೂದೆಯ ಮೇಲೆ ಶ್ರೀಮಾನ್ ಶಾಮಣ್ಣನವರು ಮತ್ತು ಶ್ರೀಮಾನ್ ಕಕ್ಕಿಲ್ಲಾಯ ಅವರು ಮಾತನಾಡಿ ಇದನ್ನು ಸ್ವಾಗತಿಸಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತಾ ಬಾಲಾಪರಾಧಿಗಳು ಹೆಚ್ಚುತ್ತಿದ್ದಾರೆ, ಮತ್ತು ಬೆಂಗಳೂರು ಸಿಟಿಯಲ್ಲಿ ಕೆಲವು ಹುಡುಗರು ಎಂಜಲು ಎಲೆಯನ್ನು ಆರಿಸಿಕೊಂಡು ಅದರಲ್ಲಿರತಕ್ಕದ್ದನ್ನು ತಿನ್ನುವುದು ಪಿಕ್ ಪಾಕೆಟ್ ಮಾಡುವುದು, ಕಳ್ಳತನ ಮಾಡುವುದು ಮುಂತಾದ ಕೆಟ್ಟ ಹವ್ಯಾಸಗಳಿಗೆ ಬಲಿಯಾಗುತ್ತಿದ್ದಾರೆಂದೂ ಹಲವು ಸೂಚನೆಗಳನ್ನೂ ಮತ್ತು ಸಲಹೆಗಳನ್ನೂ ಕೊಟ್ಟಿದಾರೆ. ನಿಜವಾಗಿ ಈಗ ಹೇಳಬೇಕಾದರೆ ನಮ್ಮ ಇಲಾಖೆಯಲ್ಲಿ ಬಾಲಾಪರಾಧಗಳನ್ನು ತಡೆಯುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೇವೆ. ಮತ್ತು ಬಾಲಾಪರಾಧಿಗಳನ್ನು ಸರಿಪಡಿಸುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮಂಗಳೂರು ಜ್ಯುವಿನೈಲ್ ಸರ್ವೀಸ್ ಬ್ಯೂರೋಗಳನ್ನು ಬೆಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ದಾವಣಗೆರೆಯಲ್ಲಿ ತೆರೆದಿದ್ದೇವೆ. ಸೂಪರಿನ್‌ಟೆಂಡೆಂಟ್ ಅವರು ಪ್ರತಿ ಸ್ಲಮ್‌ಗಳಲ್ಲಿಯೂ ಸಂಚಾರ ಮಾಡಿ ಯಾರಾದರೂ ಮಕ್ಕಳು ಅಂಥಾ ಕೆಟ್ಟ ಕೆಲಸಗಳಲ್ಲಿ ತೊಡಗಿದ್ದರೆ, ಕೆಟ್ಟ ಹವ್ಯಾಸಗಳಲ್ಲಿ ತೊಡಗಿದ್ದರೆ ಆ ಮಕ್ಕಳ ಮನೆಗಳಿಗೆ ಹೋಗಿ ಅವರ ತಂದೆ ತಾಯಿಗಳಿಗೆ ಬುದ್ಧಿವಾದವನ್ನು ಹೇಳಿ ಆ ಮಕ್ಕಳನ್ನು ಕಂಟ್ರೋಲ್ ಮಾಡುವಂತೆ ವ್ಯವಸ್ಥೆ ಮಾಡುವುದು, ಮತ್ತು ಅಂಥಾ ಮಕ್ಕಳ ಮನಸ್ಸನ್ನು ಸ್ವಚ್ಛ ಮಾಡಿ ಅವರು ಅಂಥಾ ಕೆಟ್ಟ ಕೆಲಸಗಳನ್ನು ಮಾಡದಂತೆ ಬುದ್ಧಿವಾದವನ್ನು ಹೇಳಿ ಅವರು ಅಪರಾಧಗಳನ್ನು ಮಾಡದಂತೆ ತಡೆಗಟ್ಟುವುದು ಇತ್ಯಾದಿ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಯಾವಾಗ ಅವರಿಗೆ ಕೆಲಸ ಇರುವುದಿಲ್ಲ ಆಗ ಅವರು ಇಂಥಾ ಕೆಟ್ಟ ಕೆಲಸದಲ್ಲಿ ತೊಡಗುವುದು ಸ್ವಾಭಾವಿಕ. ಅಂಥಾ ಸಂದರ್ಭದಲ್ಲಿ ಅವರು ಮನಸ್ಸನ್ನು ಡೈವರ್ಟ್ ಮಾಡುವುದಕ್ಕಾಗಿ ನಮ್ಮ ರಾಜ್ಯದಲ್ಲಿ ಸುಮಾರು ೧೫ ಪ್ಲೇ ಸೆಂಟರುಗಳನ್ನು ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ಬೆಂಗಳೂರು ಈ ಪ್ರದೇಶಗಳಲ್ಲಿ ತೆರೆದು ಮಕ್ಕಳಿಗೆ ಆಹಾರವನ್ನು ಕೊಡುವ ಏರ್ಪಾಡನ್ನು ಸಹ ನಾವು ಮಾಡಿದ್ದೇವೆ. ಅಪ್ರಾಪ್ತ

ವಯಸ್ಕರು ಮಕ್ಕಳು ಅಪರಾಧಗಳನ್ನು ಮಾಡದ ಹಾಗೆ ತಡೆಗಟ್ಟಲು ಏನಾದರೂ ಒಂದು ಕಾಯಿದೆಯನ್ನು ಮಾಡಬೇಕು ಎಂದು ತಿಳಿದುಕೊಂಡು ಈಗ ಇದನ್ನು ತಂದಿದ್ದೇವೆ. ಈ ಮಸೂದೆಯನ್ನು ಚರ್ಚೆ ಮಾಡುವ ಕಾಲದಲ್ಲಿ ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ನಾವು ಅವುಗಳನ್ನೆಲ್ಲಾ ಉಪಯೋಗಿಸಿಕೊಂಡು ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ತಮಗೆ ಆಶ್ವಾಸನೆಯನ್ನು ಕೊಟ್ಟು ಮಾನ್ಯ ಸದಸ್ಯರು ಇದನ್ನು ಸಂಪೂರ್ಣವಾಗಿ ಅಂಗೀಕರಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

MR. DEPUTY SPEAKER.—I will put the consideration motion to the vote of the House.

The question is.—

"That the Karnataka Children (Amendment) Bill, 1976, be taken into consideration."

The Motion was adopted

CLAUSES 2 to 4

MR. DEPUTY SPEAKER.—There are no amendments. I will put clauses 2, 3 and 4 to the vote of the House.

The question is.—

"That clauses 2, to 4 both inclusive do stand part of the Bill."

The Motion was adopted

clauses 2, to 4 both inclusive were added to the Bill.

CLAUSE 1 etc.

MR. DEPUTY SPEAKER.—The question is.

"That Clause 1, the Long Title, the Preamble and the Enacting formula do stand part of the Bill."

The Motion was adopted

Clause 1, the long Title the Preamble and the Enacting Formula were added to the Bill.

Motion to Pass

SMT. MANORAMA MADHWARAJ.—I move.

"That the Karnataka Children (Amendment) Bill, 1976, be passed."

MR. DEPUTY SPEAKER.—The question is "That the Karnataka Children (Amendment) Bill 1976 be passed

Motion was adopted and the Bill was passed